ಕೂತಿರುತ್ತಿದ್ದಳು ಮಾವ ಬಂದು ಕರೆದುಕೊಂಡು ಹೋಗುವವರೆಗೆ. ಇನ್ನು ದೇವರ ಹತ್ತಿರ ಹೋಗುವುದೆಂದರೆ ಏನು. ಎಂತೆಲ್ಲ ಎರಡು ವರ್ಷ ಚಿಂತೆ ಮಾಡಿದವಳಿಗೆ ಸಾಯುವುದು ಅನ್ನುವುದು ಅಷ್ಟಷ್ಟು ಗೊತ್ತಾದಂತಾಗಿತ್ತು. ಭೂಮಿಯ ಮೇಲಿನ ಎಲ್ಲ ಜೀವಿಗಳಿಗೆ ಉಸಿರಾಡಲು ಆಮ್ಲಜನಕ ಅವಶ್ಯಕ. ಆಮ್ಲಜನಕ ಇಲ್ಲದಿದ್ದರೆ ಜೀವಿಗಳು ಸತ್ತು ಹೋಗುತ್ತವೆ. ಲಕ್ಷ್ಮಿಗೆ ಆ ಕ್ಷಣ ಆಮ್ಲಜನಕ ಸಿಕ್ಕಿರಲಿಕ್ಕಿಲ್ಲ. ಬಹುಶಃ ಅವಳು ತನ್ನ ಮೂಗನ್ನು ಮುಚ್ಚಿಕೊಂಡಿರಬಹುದು. ಇಲ್ಲವೆ ಅವಳ ಮೂಗನ್ನು ಯಾರೋ ಮುಚ್ಚಿರಬಹುದು. ಇಲ್ಲವೇ ಅವಳು ನೀರಿಗೆ ಬಿದ್ದಾಗ ಅವಳಿಗೆ ನೀರಿನಲ್ಲಿರುವ ಆಮ್ಲಜನಕವನ್ನು ಉಸಿರಾಡಲು ಸಾಧ್ಯವಾಗಿಲ್ಲ. ಏಕೆಂದರೆ ಅವಳಿಗೆ ಕಿವಿಗಳು ಮಾತ್ರ ಇವೆ. ಆದರೆ, ಕಿವಿರುಗಳು ಇಲ್ಲ... ನಿದ್ರೆ ಬರದ ರಾತ್ರಿಯಲ್ಲಿ ಇಂಥದ್ದೇ ಯೋಚನೆಗಳು.. ಶಾಲೆಯಿಂದ ಮನೆಗೆ ಇಬ್ಬರದ್ದೂ ಒಂದೇ ದಾರಿಯಾದರೂ ಅವಳನ್ನು ಮಾತ್ರ ಮಾವ ತನ್ನ ಬೈಕಿನಲ್ಲಿ ಮುಂದೆ ಕೂರಿಸಿಕೊಂಡು ಕರೆದೊಯ್ಯುತ್ತಿದ್ದ. ನೀನೂ ಹೋಗಬಹುದಿತ್ತಲ್ಲ ಅಂದ ಮೇಷ್ಟ್ರಿಗೆ ಮಕ್ಕಳು, 'ಅವ್ರು ಇವ್ರನ್ನ ಮುಟ್ಟಿಸ್ಕಣಲ್ಲ ಸಾರ್' ಅಂತ ಅಂದಿದ್ದರು. ಆದರೆ, ಲಕ್ಷ್ಮಿಯನ್ನು ತಾನು ಮುಟ್ಟಿದರೆ, ಮುಟ್ಟಿ ಆಟವಾಡುತ್ತಿದ್ದುದನ್ನು ಅಜ್ಜ ನೋಡಿದ್ದರೂ ಆಗೇನೂ ಬೈದಿರಲಿಲ್ಲ. ಆದರೆ, ಲಕ್ಷ್ಮಿಯ ಹೆಸರು ಮನೆಯಲ್ಲಿ ತೆಗೆದದ್ದೆ ಅಮ್ಮ ಒಂಥರಾ ಮೌನಕ್ಕೆ ಹೋಗುತ್ತಿದ್ದಳು...

ಒಂದು ದಿನ ಲಕ್ಷ್ಮಿಗೆ ವೈಶಾಲಿ 'ನಿಮ್ಮನೆ ಹೊಗೆ... ನಮ್ಮನೆ ಹೊಗೆ ಅಲ್ಲಿ ಆಕಾಶದಲ್ಲಿ ಹೋಗಿ ಕೂಡಿಕೊಳ್ತಾ ಇದೆ...' ಅಂತಾ ಅನ್ನುತ್ತ ಅವಳ ಕೈ ಹಿಡಿದು ನಡೆಯುತ್ತಿದ್ದವಳ ಸರಕ್ಕನೆ ಎತ್ತಿಕೊಂಡು... 'ಹೊಗೆ ಹಾಕಿಸಿದ್ದಾಗಿದೆ... ನೀವಿಬ್ಬರು ಮತ್ತೆ ಕೂಡುವುದು ಬೇಡ...' ಅಂತಂದ ಅವಳ ಮಾವ ಜೋರಾಗಿ ದಬ್ಬಿ ಹೋಗಿದ್ದ. ಆ ವಿಷಯವನ್ನು ಅಪ್ಪನ ಬಳಿ ಹೇಳಲೋ, ಅಮ್ಮನ ಬಳಿ ಹೇಳಲೋ, ಮಾಸ್ತರರ ಬಳಿ ಹೇಳಲೋ ಅಂತಾ ಯೋಚಿಸುತ್ತಿದ್ದವಳಿಗೆ ಕೊನೆಗೆ ಯಾರ ಬಳಿಯೂ ಹೇಳದೇ ಇರುವುದೇ ಸೂಕ್ತ ಎಂದು ಅನಿಸಿತು. ಪುಟ್ಟಲಕ್ಷ್ಮಿ ವೈಶಾಲಿಗೆ 'ಶಾ...' ಅಂತ ಕರೆಯುತ್ತಿದ್ದಳು. ಅವಳು ದೊಡ್ಡವಳಾದ ಮೇಲೆ ಪೂರ್ತಿ ಹೆಸರು ಕರೆಯುತ್ತಾಳೆ ಬಿಡು ಅಂದಿದ್ದಳು ಅಮ್ಮ. ಆದರೆ, ಅವಳ ವಯಸ್ಸಿನ ಬೇರೆ ಎಲ್ಲ ಮಕ್ಕಳು ಎಷ್ಟು ಚೆನ್ನಾಗಿ ಮಾತಾಡುತ್ತಾರಲ್ಲ ಅಂತಾ ಒಳಗೇ ಯೋಚಿಸಿ ಸುಮ್ಮನಾಗಿದ್ದಳು.

## 3

'ಮತ್ತೆ... ನಿಮ್ಮನೆ ಅಜ್ಜ ಅಲ್ಲಿ ದೊಡ್ಡ ಬೆಂಕಿ ಹಾಕೀರು...' ಅಂತೂ ತನ್ನ ಧ್ವನಿ ತನ್ನ ಉಸಿರು ಮರಳಿ ತನ್ನ ಬಳಿಗೆ ಬಂದಂತೆ ಅನ್ನಿಸಿದ್ದೇ ಒಮ್ಮೆಲೆ ವದರಿದ್ದಳು. ವಿಚಲಿತಳಾಗದೆ ರಾಜೇಶ್ವರಿಯಮ್ಮ 'ಚಳಿಗೆ...' ಅಂದು ತಲೆಗೂದಲು ಬಿಡಿಸಿಕೊಂಡು ಬಾಚುವ ಸನ್ನಾಹದಲ್ಲಿದ್ದಳು. 'ಅಲ್ಲಾ ದೊಡ್ಡ ಬೆಂಕಿ...' ಅಂದು ಕೈಯಗಲಿಸಿ ವಿಶಾಲವಾದ ಜಾಗದಲ್ಲಿ ಎಂಬಂತೆ ತೋರಿಸಿದಳು ವೈಶಾಲಿ. ಈಗ ಕಣ್ಣು ಸರಿಯಾಗಿ ಬಿಟ್ಟಂತೆ, ಈಗ ಜನ್ಮಾಂತರದ ಮಸುಕು ಸರಿದಂತೆ ಆ ಅಜ್ಜನ ಏಕೈಕ ಮಗಳು, ಸತ್ತಂತೆ ಕಾಣೆಯಾದ ಪುಟ್ಟ ಲಕ್ಷ್ಮಿಯ ಅಜ್ಜಿ, ಮೀಸೆ ಅಣ್ಣಯ್ಯನ ತಾಯಿ, 'ಎಲ್ಲಿ?' ಎಂದಳು. 'ನಮ್ ಮನಿ ಮುಂದಿನ ಬ್ಯಾಣದಾಚೆ...'

'ಹೌದಾ...' ಅಂದು ತಲೆಗೂದಲನ್ನು ಅವಸರದ ತುರುಬಿಗೆ ಬದಲಾಯಿಸುತ್ತ ಎರಡೂ ಸಾಗುವಾನಿ ಬಾಗಿಲನ್ನು ಸರಿಯಾಗಿ ತೆರೆದಳು. ಯಾವುದೋ ಕೋಣೆಯಲ್ಲಿ ಒಂದು ತೊಲೆಗೆ ಕಟ್ಟಿದ ಹಗ್ಗ, ಅದರ ಕಬ್ಬಿಣದ ಬಳೆ, ಕಿರಗುಡುತ್ತ ಅಲ್ಲಾಡುವ ಸದ್ದು ಕೇಳಿದಂತಾಯ್ತು. ಯಾರೋ ಜೋಕಾಲಿಯಾಡುತ್ತಿದ್ದಾರೆ... ಇಷ್ಟು ಹೊತ್ತಿನಲ್ಲಾ... ವೈಶಾಲಿಯ ಮೈ ಬಿಸಿಯಾಯಿತು... ತಲೆ ತಿರುಗಿದಂತಾಯ್ತು... ಇಷ್ಟಕ್ಕೆ ಮುಗಿಲಿಲ್ಲ... ಇಷ್ಟೇ ಆಗಿದ್ದರೆ ತಾನು ಹುಚ್ಚೆದ್ದು ಓಡಿ ಬರುತ್ತಿರಲಿಲ್ಲ ಅನ್ನುವ ದನಿಯಲ್ಲಿ 'ಮತ್ತೆ... ಮತ್ತೆ...' ಅನ್ನುತ್ತಿದ್ದವಳ ತಡೆದು, 'ನಮ್ಮನಿ ಅಜ್ಜನ ಚಿಂತಿ ಬಿಟ್ಟಾಕು... ನೀ ಮನಿ ಕಡಿ ನಡಿ... ನಿಮ್ಮಮ್ಮ ಹುಡುಕ್ತಾ ಇರಬಹುದು' ಎಂದು ಹತ್ತಿರ ಬಂದು ಲೋಟ ತೆಗೆದುಕೊಂಡ ರಾಜೇಶ್ವರಿಯಮ್ಮ ತನ್ನ ಮೊಮ್ಮಗಳ ಅಸ್ಪಷ್ಟ ಕರುಳುಹಿಂಡುವ ಚಿತ್ರವನ್ನು ಈ ಬಾಲೆಯಲ್ಲಿ ಅರಸಲು ಯತ್ನಿಸಿದಂತೆ ವೈಶಾಲಿಗೆ ಅನ್ನಿಸಿತು. ಗಂಟಲುಬ್ಬಿದಂತಾಗಿ... ಕಣ್ಣೊರೆಸಿಕೊಂಡು... ಮುಟ್ಟಿ... ಮೈತಡವಿ... ಕಳಿಸಿಕೊಡುವಂತೆ ಬೆನ್ನಿಗೆ ಕೈಹಾಕಿ ಅವಳ ಬಾಗಿಲೆಡೆ ತೋರಿಸುತ್ತಿದ್ದಂತೆ... ಅಜ್ಜನ